# ಕರ್ನಾಟಕ ವಿಧಾನ ಪರಿಷತ್ತು

## ನೂರ ನಲವತ್ತ ಮೂರನೆಯ ಅಧಿವೇಶನದ ಮುಂದುವರೆದ ಉಪವೇಶನ

## **ಚುಕ್ಕೆ ರಹಿತ ಪ್ರಶ್ನೆ**

ದಿನಾಂಕ : 31-03-2021 ಪ್ರಶ್ನೆ ಸಂಖ್ಯೆ : 3029 (2518)

ಸದಸ್ಯರ ಹೆಸರು ಮತ್ತು ಕ್ಷೇತ್ರ : ಶ್ರೀ ರಘುನಾಥ್‌ರಾವ್ ಮಲ್ಕಾಪೂರೆ (ವಿಧಾನಸಭೆಯಿಂದ ಚುನಾಯಿತರಾದವರು)

ಉತ್ತರ ನೀಡಬೇಕಾದ ದಿನಾಂಕ : 31-03-2021

ಉತ್ತರಿಸುವ ಸಚಿವರು: ಕಂದಾಯ ಸಚಿವರು

ವಿಷಯ : ಗುತ್ತಿಗೆ/ಪರವಾನಗಿ ಭೂಮಾಪಕರನ್ನು ವರ್ಗಾವಣೆ ಮಾಡುವ ಬಗ್ಗೆ

ಅ) ಬೀದರ್ ಜಿಲ್ಲೆಯಲ್ಲಿ ಖಾಯಂ/ ಗುತ್ತಿಗೆ (ಪರವಾನಗಿ) ಭೂಮಾಪಕರು ಒಂದೇ ಸ್ಥಳದಲ್ಲಿ ಎಷ್ಟು ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ ; (ತಾಲ್ಲೂಕುವಾರು, ವರ್ಷವಾರು ಅವರ ಹೆಸರುಗಳೊಂದಿಗೆ ಸಂಪೂರ್ಣ ಮಾಹಿತಿ ನೀಡುವುದು )

(ಆ) ಖಾಯಂ/ ಗುತ್ತಿಗೆ ಪರವಾನಗಿ ಭೂಮಾಪಕರು ಸರ್ವೆ ಮಾಡಲು ಹೋದಾಗ ಸರಿಯಾಗಿ ಸರ್ವೆ ಮಾಡದೇ ರೈತರಿಗೆ ತೊಂದರೆ ಮಾಡುತ್ತಿರುವುದಲ್ಲದೆ, ಅಲೆದಾಡಿಸುತ್ತಿರುವುದು ಮತ್ತು ಸುಳ್ಳು ಮಾಹಿತಿ ನೀಡುತ್ತಿರುವ ಸರ್ವೇಯರ್‌ಗಳ ಮೇಲೆ ಸರ್ಕಾರ ಕೈಗೊಂಡ ಕ್ರಮಗಳೇನು ; (ಮಾಹಿತಿ ನೀಡುವುದು )

(ಇ) ಗುತ್ತಿಗೆ ಭೂಮಾಪಕರು ಹಲವಾರು ವರ್ಷಗಳಿಂದ ಒಂದೇ ಸ್ಥಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಅವರನ್ನು ಬೇರೆಡೆಗೆ ವರ್ಗಾವಣೆ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? (ವಿವರ ನೀಡುವುದು)